ಉ. ರೇಷ್ಮೆ ಗೂಡು ಬಿಚ್ಚುವ ಘಟಕ ಮಂಜೂರಾಗಿದೆಯೇ;

ಊ. ಹಾಗಿದ್ದರೆ ಅದರ ಅನುಷ್ಠಾನ ಯಾವಾಗ ಜಾರಿಗೆ ತರಲಾಗಿದೆ; ಮಂಜೂರಾಗದಿದ್ದರೆ ಮಂಜೂರಾಗುವ ಸಂಭವವಿದೆಯೇ ?

ಡಾ।। ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು):–

ಅ. 25ನೇ ಮೇ 1985 ರಂದು ರೇಷ್ಮೆ ಕೃಷಿ ತರಬೇತಿ ಕೇಂದ್ರ ಪ್ರಾರಂಭವಾದದ್ದು, ಇದನ್ನು ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯಡಿಯಲ್ಲಿ ಪ್ರಾರಂಭ ಮಾಡಿದ್ದು ಇದಕ್ಕೆ ವೆಚ್ಚವಾಗಿರುವ ಹಣ 66.19 ಲಕ್ಷ ರೂಪಾಯಿಗಳು.

ಆ. ಮಂಜೂರಾಗಿರುವ ಒಟ್ಟು ಭೂಮಿ 54.32 ಎಕರೆ. ಹಿಪ್ಪು ನೇರಳೆ ವ್ಯವಸಾಯ 4 ಎಕರೆಗಳಲ್ಲಿ, ಸಾಮೂಹಿಕ ಅರಣ್ಯ 24.32 ಎಕರೆ ಪ್ರದೇಶದಲ್ಲಿ ಸಾಮೂಹಿಕ ಸಮುದಾಯ ತೋಟ 10 ಎಕರೆಗಳಲ್ಲಿ, ಕಟ್ಟಡಗಳಿಗಾಗಿ ನಿಗದಿಪಡಿಸಿರುವ ಪ್ರದೇಶ 10 ಎಕರೆ.

ಇ. ಮೂರು ಕೊಳವೆ ಬಾವಿಗಳು ಇವೆ. ಬಾವಿಯಿಂದ 1 ಘಂಟೆ ಅವಧಿಯಲ್ಲಿ ಬರತಕ್ಕಂತಹ ನೀರಿನ ಪ್ರಮಾಣ 4000 ಗ್ಯಾಲನ್‌ಗಳು.

ಈ. ಹಾಲಿ ರೇಷ್ಮೆ ಕೃಷಿ ರೈತರಿಗೆ ತರಬೇತಿ ನೀಡಲಾಗುತ್ತಿದೆ. ರಾಷ್ಟ್ರೀಯ ರೇಷ್ಮೆ ಕೃಷಿ ಯೋಜನೆಯಡಿಯಲ್ಲಿ ಮಹಿಳೆಯರಿಗೆ ತರಬೇತಿ ನೀಡಲು ಅವಕಾಶ ಕಲ್ಪಿಸಲಾಗುತ್ತಿದೆ. ನೂಲು ಬಿಚ್ಚಾಣಿಕೆಯಲ್ಲಿ ತರಬೇತಿ ಕೊಡಲು ಅವಕಾಶವನ್ನು ಕಲ್ಪಿಸಲಾಗಿದೆ. ಒಟ್ಟು 6.516 ಮಂದಿ ತರಬೇತಿ ಪಡೆದಿದ್ದಾರೆ.

ಉ. ಮಂಜೂರಾಗಿದೆ.

ಊ. ಈಗಾಗಲೇ ಕಟ್ಟಡದ ಕೆಲಸ ಪ್ರಾರಂಭವಾಗಿದೆ. ನೂರು ಬಿಚ್ಚಾಣಿಕೆ ಯಂತ್ರಗಳನ್ನು ಖರೀದಿಸಿ 1994-95ರಲ್ಲಿ ಅನುಷ್ಠಾನಕ್ಕೆ ತರಲಾಗುವುದು.

ರಾಜ್ಯದಲ್ಲಿರುವ ಅಂಧರ ಸಂಖ್ಯೆಯ ಬಗ್ಗೆ

2090: ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ್):– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿರುವ ಕಿವುಡ, ಮೂಕರ ಹಾಗೂ ಅಂಧರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು);

ಆ. ಅವರ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರವು ಕೈಗೊಳ್ಳಲಾಗಿರುವ ಕ್ರಮವೇನು ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):–

ಅ. 1992ರ ಅಂಗವಿಕಲರ ಸಮೀಕ್ಷೆ ತಾತ್ಕಾಲಿಕ ವರದಿ ಆಧಾರದ ಮೇಲೆ ರಾಜ್ಯದಲ್ಲಿ;

ಕಿವುಡರು:ಮೂಕರು	48,757
ಅಂಧರು	39,317

(ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ).

ಅ. ಅಂಗವಿಕಲರ ಕಲ್ಯಾಣಕ್ಕಾಗಿ ಸರ್ಕಾರವು ಈ ಕೆಳಗಿನ ಕಾರ್ಯಕ್ರಮಗಳನ್ನು ಅನುಷ್ಠಾನದಲ್ಲಿ ತಂದಿದೆ.

1) ಶೈಕ್ಷಣಿಕ ಕಾರ್ಯಕ್ರಮಗಳು.
2) ಉದ್ಯೋಗ ಮತ್ತು ತರಬೇತಿ ಕಾರ್ಯಕ್ರಮ.
3) ಪುನರ್ವಸತಿ ಯೋಜನೆ.
4) ಸಾಮಾಜಿಕ ಭದ್ರತಾ ಕಾರ್ಯಕ್ರಮಗಳು.
5) ಸಾರ್ವಜನಿಕ ಅರಿವು ಮೂಡಿಸುವ ಕಾರ್ಯಕ್ರಮ.

ಅನುಬಂಧ

1991–92ರ ಸಮೀಕ್ಷೆಯ ಪ್ರಕಾರ ರಾಜ್ಯದಲ್ಲಿರುವ ಜಿಲ್ಲಾವಾರು ಅಂಧರು, ಕಿವುಡರುಗಳ ಸಂಖ್ಯೆ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಅಂಧರು	ಕಿವುಡರು:ಮೂಕರು
1.	ಬೆಂಗಳೂರು (ಗ್ರಾಮಾಂತರ)	1,179	1,275
2.	ಬೆಂಗಳೂರು (ನಗರ)	2,357	2,131
3.	ಬೆಳಗಾಂ	2,153	3,584
4.	ಬಳ್ಳಾರಿ	1,470	1,800
5.	ಬೀದರ್	1,332	1,139
6.	ಬಿಜಾಪುರ	618	2,626
7.	ಚಿಕ್ಕಮಗಳೂರು	1,645	1,283
8.	ಚಿತ್ರದುರ್ಗ	1,811	2,398
9.	ಕಾರವಾರ	2,797	3,706
10.	ದಕ್ಷಿಣ ಕನ್ನಡ	1,554	2,607
11.	ಗುಲ್ಬರ್ಗಾ	2,283	3,786
12.	ಹಾಸನ	1,428	1,979
13.	ಕೊಡಗು	467	598
14.	ಕೋಲಾರ	2,508	2,722
15.	ಮಂಡ್ಯ	1,457	2,295
16.	ಮೈಸೂರು	4,711	4,313
17.	ರಾಯಚೂರು	3,527	3,750
18.	ಶಿವಮೊಗ್ಗ	1,532	1,730
19.	ತುಮಕೂರು	2,497	3,696
20.	ಉತ್ತರ ಕನ್ನಡ	591	1,259
		39,317	48,757

ವಿಶ್ವ ಕಾರ್ಯಕ್ರಮದ ಯೋಜನೆಯಡಿ ಫಲಾನುಭವಿಗಳನ್ನು ಗುರುತಿಸಿರುವ ಬಗ್ಗೆ

2092: ಶ್ರೀ ಮಂಜುನಾಥ ಸಿ. ಕುನ್ನೂರ್ (ಶಿಗ್ಗಾಂವ್):– ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ರಾಜ್ಯ ಸರ್ಕಾರವು ವಿಶ್ವ ಕಾರ್ಯಕ್ರಮದ ಯೋಜನೆಯಡಿ ಗುರುತಿಸಲಾಗುವ ಫಲಾನುಭವಿಗಳೆಷ್ಟು ? ಈ ಬಗ್ಗೆ ಖರ್ಚು ಮಾಡಲಾಗಿರುವ ಹಣವೆಷ್ಟು;